# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 56 ಪ್ರಾ.ಸಾ. :39**

| | | |
|---|---|---|
| ಸಾಕ್ಷಿಯ ಹೆಸರು | : | ಲಕ್ಷ್ಮಣ ಲಗ್ಮಪ್ಪ ಪೂಜಾರಿ |
| ತಂದೆಯ ಹೆಸರು | : | ಲಗ್ಮಪ್ಪ ಪೂಜಾರಿ |
| ವಯಸ್ಸು | : | 62 ವರ್ಷ |
| ಕೆಲಸ | : | ನಿವೃತ್ತ ಪಿ.ಎಸ್.ಐ. |
| ವಾಸ | : | ಗೋಕಾಕ್, ಬೆಳಗಾವಿ |

**ದಿನಾಂಕಃ 10-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 03-09-2013 ರಿಂದ ದಿಃ 25-04-2016 ರ ವರೆಗೆ ನಾನು ಕದ್ರಾ ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 14-02-2014 ರಂದು ನಾನು ಬಂದೋಬಸ್ತು ಕರ್ತವ್ಯ ಮುಗಿಸಿ, ರಾತ್ರಿ 11.15 ಗಂಟೆ ಸಮಯದಲ್ಲಿ ಗೋಟೆಗಾಳಿಯ ಬಳಿ ಕದ್ರಾ ಕಡೆಗೆ ಹೋಗುತ್ತಿರುವಾಗ, ಕದ್ರಾ ಠಾಣೆಯ ಎಸ್.ಹೆಚ್.ಓ. ರವರು ನನಗೆ ಕರೆ ಮಾಡಿ ರಾಜೀವನಗರದ ವೇಲು ರವರ ಮನೆಯಲ್ಲಿ ಆತನ ಮಗಳಾದ ಅಶ್ವಿನಿಯನ್ನು ಯಾರೋ ಕೊಲೆ ಮಾಡಿದ್ದಾರೆ ಹಾಗೂ ಆತನ ಹೆಂಡತಿಯ ಕೈಯನ್ನು ಕತ್ತರಿಸಿದ್ದಾರೆ, ಆದ್ದರಿಂದ ಕೂಡಲೇ ಸ್ಥಳಕ್ಕೆ ಬನ್ನಿ ಎಂದು ತಿಳಿಸಿದ್ದು, ಅದರಂತೆ ನಾನು ರಾಜೀವನಗರದಲ್ಲಿದ್ದ ವೇಲು ರವರ ಮನೆಯ ಬಳಿ ರಾತ್ರಿ 11.45 ಗಂಟೆ ಸಮಯಕ್ಕೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಬಹಳ ಜನರು ಸೇರಿದ್ದು, ವೇಲು ರವರ ಮನೆಯಲ್ಲಿ ವಿದ್ಯುತ್ ಇರಲಿಲ್ಲ, ಆದ್ದರಿಂದ ನಾನು ಬ್ಯಾಟರಿ ಸಹಾಯದಿಂದ ಮನೆಯ ಒಳಗೆ ಹೋಗಿ ನೋಡಿದಾಗ, ವೇಲು ರವರ ಹೆಂಡತಿ ಜಾನಕಿಯು ಮನೆಯ ಹಾಲಿನಲ್ಲಿ ಕುಳಿತಿದ್ದಳು, ಆಕೆಯ ಎಡ ಮುಂಗೈ ತುಂಡಾಗಿ ಕೆಳಗೆ ಬಿದ್ದಿತ್ತು ಮತ್ತು ರಕ್ತ ಸುರಿಯುತ್ತಿತ್ತು. ಅದೇ ಮನೆಯಲ್ಲಿ ವೇಲುವಿನ ಮಗಳಾದ ಅಶ್ವಿನಿಯು ಕೊಲೆಯಾಗಿ ಬಿದ್ದಿದ್ದಳು. ಆದರೆ ಮನೆಯಲ್ಲಿ ವೇಲು ಹಾಗೂ ಆತನ ಮಗನು

ಕಾಣಿಸಿರುವುದಿಲ್ಲ. ನಂತರ ಜಾನಕಿಯನ್ನು ನಮ್ಮ ಪೊಲೀಸ್ ಸಿಬ್ಬಂದಿಯೊಂದಿಗೆ ಜೀಪಿನಲ್ಲಿ ಕೆ.ಪಿ.ಸಿ. ಆಸ್ಪತ್ರೆಗೆ ಕಳುಹಿಸಿರುತ್ತೇನೆ.

2. ಆನಂತರ ನಾವು ಹಾಗೂ ಊರಿನ ಜನರು ವೇಲು ಹಾಗೂ ಆತನ ಮಗನನ್ನು ಎಲ್ಲಾ ಕಡೆ ಹುಡುಕಾಡಿದಾಗ, ಅವರು ಎಲ್ಲಿಯೂ ಕಂಡುಬಂದಿರುವುದಿಲ್ಲ. ಆದರೆ ರಾತ್ರಿ ಸುಮಾರು 1.00 ಗಂಟೆಯ ಸಮಯದಲ್ಲಿ ಕೊಡ್ಸಳ್ಳಿಗೆ ಹೋಗುವ ಅರಣ್ಯದ ಕಾಲುದಾರಿಯಲ್ಲಿ ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿ ಕೊಲೆಯಾಗಿ ಬಿದ್ದಿರುತ್ತಾರೆ. ನಂತರ ನಾನು ನಮ್ಮ ಸಿಬ್ಬಂದಿಗಳನ್ನು ಶವಗಳ ಕಾವಲಿಗೆ ನಿಯೋಜಿಸಿರುತ್ತೇನೆ. ಆನಂತರ ಸ್ಥಳದಲ್ಲಿದ್ದ ಚಾಸಾ-1 ಎಂ.ಆರ್.ಎಸ್. ಪಿಳ್ಳೈ ರವರು ತಾನು ವೇಲು ಹಾಗೂ ಆತನ ಮಕ್ಕಳಾದ ಅಶ್ವಿನಿ ಮತ್ತು ಸತ್ಯನಾರಾಯಣ ಮೂರ್ತಿಯನ್ನು ಯಾರೋ ಹರಿತವಾದ ಆಯುಧದಿಂದ ಕೊಲೆ ಮಾಡಿರುವ ಶವಗಳನ್ನು ನೋಡಿದ ಬಗ್ಗೆ ಹಾಗೂ ವೇಲುವಿನ ಹೆಂಡತಿ ಜಾನಕಿಯ ಕೈ ತುಂಡಾದ ಮತ್ತು ಆಕೆಯ ಮೇಲೆ ಹರಿತವಾದ ಆಯುಧದಿಂದ ಹಲ್ಲೆಯಾದ ಬಗ್ಗೆ ಹೇಳಿಕೆ ದೂರನ್ನು ನೀಡುವುದಾಗಿ ತಿಳಿಸಿದ್ದು, ನಂತರ ನಾನು ಅವರನ್ನು ಠಾಣೆಗೆ ಕರೆದುಕೊಂಡು ಬಂದು ಅವರು ಹೇಳಿದಂತೆ ದೂರನ್ನು ನಮ್ಮ ಠಾಣೆಯ ಸಿಬ್ಬಂದಿಯಾದ ಚಾಸಾ-48 ಪರಮೇಶ್ವರ್ ರವರಿಂದ ಗಣಕ ಯಂತ್ರದ ಮೂಲಕ ಗಣಕೀಕರಿಸಿ, ಸದರಿ ಗಣಕೀಕರಿಸಿದ ದೂರನ್ನು ಚಾಸಾ-1 ರವರಿಗೆ ಓದಿ, ಹೇಳಿ, ಕೇಳಿ ಸರಿಯಿದೆ ಎಂದು ಹೇಳಿದ ನಂತರ ಸದರಿ ದೂರಿಗೆ ಚಾಸಾ-1 ರವರು ಸಹಿ ಮಾಡಿ ನೀಡಿದ್ದು, ನಂತರ ನಾನು ಸದರಿ ದೂರನ್ನು ಸ್ವೀಕರಿಸಿ, ನಮ್ಮ ಠಾಣಾ ಗುನ್ನಾ ಸಂಖ್ಯೆ: 05/2014 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ. 302 ಮತ್ತು 307 ರಡಿಯಲ್ಲಿ ದಿಃ15-02-2014 ರಂದು ಬೆಳಿಗ್ಗೆಯ ಜಾವ 2.00 ಗಂಟೆಗೆ ಪ್ರಕರಣ ದಾಖಲಿಸಿ, ನಂತರ ದೂರು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನಮ್ಮ ಸಿಬ್ಬಂದಿಯಾದ ಚಾಸಾ-54 ಇಫ್ರಾನ್ ರವರ ಮೂಲಕ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಹಾಗೂ ಸದರಿ ದೂರು ಹಾಗೂ ಪ್ರ.ವ. ವರದಿಯ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಇಮೇಲ್ ಮೂಲಕ ಕಳುಹಿಸಿರುತ್ತೇನೆ. ಸಾಕ್ಷಿಯು ತಾನು ಸ್ವೀಕರಿಸಿದ ದೂರನ್ನು ನೋಡಿ, ಗುರುತಿಸಿದ್ದು, ಅದನ್ನು ನಿ.ಪಿ-87 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-87(ಎ) ಮತ್ತು (ಬಿ)ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿರುವ ಚಾಸಾ-1 ರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು,

ಅದನ್ನು ನಿ.ಪಿ–87(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ದಾಖಲಿಸಿದ ಪ್ರ.ವ. ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ–88 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–88(ಎ) ಎಂದು ಗುರುತಿಸಲಾಯಿತು.

3. ಸದರಿ ಪ್ರಕರಣದ ಕಡತವನ್ನು ನಾನು ಚಾಸಾ–57 ಅರುಣ ಕುಮಾರ್ ಸಿ.ಪಿ.ಐ. ರವರಿಗೆ ಹಸ್ತಾಂತರಿಸಿರುತ್ತೇನೆ. ಆನಂತರ ಚಾಸಾ–57 ರವರು ಸತ್ಯನಾರಾಯಣ ಮೂರ್ತಿಯ ಶವದ ಶವ ಪಂಚನಾಮೆಯನ್ನು ಮಾಡಲು ಹೇಳಿದಂತೆ, ನಾನು ಕಾರವಾರದ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ಬಂದು ಸದರಿ ಶವದ ಪಂಚನಾಮೆಯನ್ನು ಮಾಡಲು ಚಾಸಾ–2 ಶ್ಯಾಮನಾಥ ಮತ್ತು ಚಾಸಾ–7 ದಿಲೀಪರನ್ನು ಪಂಚರನ್ನಾಗಿ ಬರಮಾಡಿಕೊಂಡು, ಶವಗಾರದಲ್ಲಿದ್ದ ಸತ್ಯನಾರಾಯಣ ಮೂರ್ತಿಯ ಶವದ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ ಮತ್ತು ಫೋಟೊ ತೆಗೆಸಿರುತ್ತೇನೆ. ಶವಪಂಚನಾಮೆಯ ಕಾಲಕ್ಕೆ ಸದರಿ ಶವದ ಮೈಮೇಲೆ ನೇರಳೆ ಬಣ್ಣದ ಅರ್ಧ ತೋಳಿನ ಶರ್ಟ್, ತಿಳಿನೀಲಿ ಬಣ್ಣದ ಚಡ್ಡಿ, ಸೊಂಟದಲ್ಲಿ ಉಡಿದಾರ ಮತ್ತು ಎರಡೂ ಕಿವಿಯಲ್ಲಿ ಬಂಗಾರ ನಮೂನೆಯ ಓಲೆಗಳು ಇದ್ದವು. ಶವದ ಎಡ ಕುತ್ತಿಗೆಯಲ್ಲಿ 8½ ಸೆಂ.ಮೀ. ಉದ್ದ X 4 ಸೆಂ.ಮೀ. ಆಳ X 4½ ಸೆಂ.ಮೀ. ಅಗಲ ಅಳತೆಯ ಹರಿತವಾದ ಕತ್ತಿಯಿಂದ ಕಡಿದ ಗಾಯವಾಗಿ ಒಳಗಿನ ಎಲುಬು ತುಂಡಾಗಿ ಕಾಣುತ್ತಿತ್ತು. ಸದರಿ ಶವಪಂಚನಾಮೆಯನ್ನು ನಾನು ಬೆಳಿಗ್ಗೆ 11.40 ರಿಂದ ಮಧ್ಯಾಹ್ನ 1.10 ರವರೆಗೆ ಜರುಗಿಸಿರುತ್ತೇನೆ ಹಾಗೂ ಸದರಿ ಶವ ಪಂಚನಾಮೆಗೆ ಪಂಚರ ಸಹಿಯನ್ನು ಪಡೆದು, ನಾನೂ ಸಹಿ ಮಾಡಿರುತ್ತೇನೆ. ಶವಪಂಚನಾಮೆಯ ಸಮಯದಲ್ಲಿ ಶವದ ಕಿವಿಯಲ್ಲಿದ್ದ ಬಂಗಾರದ ನಮೂನೆಯ ಓಲೆಗಳನ್ನು ವೇಲುವಿನ ತಮ್ಮನಾದ ಚಾಸಾ–30 ವಿಶ್ವನಾಥ ರವರಿಗೆ ನೀಡಿರುತ್ತೇನೆ. ಸಾಕ್ಷಿಯು ಸತ್ಯನಾರಾಯಣ ಮೂರ್ತಿಯ ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ–17 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–17(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ನಿ.ಪಿ–17 ಶವಪಂಚನಾಮೆಯಲ್ಲಿರುವ ಚಾಸಾ–7 ದಿಲೀಪರವರ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ–17(ಡಿ) ಎಂದು ಗುರುತಿಸಲಾಯಿತು. ಶವಪಂಚನಾಮೆಯ ಕಾಲಕ್ಕೆ ತೆಗೆದ ನಿಪಿ–18 ಮತ್ತು 19 ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ಫೋಟೊದಲ್ಲಿ ಸತ್ಯನಾರಾಯಣ ಮೂರ್ತಿಯ ಶವವನ್ನು ನೋಡಿ ಗುರುತಿಸಿರುತ್ತಾರೆ. ಶವದ

ಮೈಮೇಲಿದ್ದ ಬಟ್ಟೆಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು–ಮುದ್ದೆಮಾಲು ನಂ.17 ಮತ್ತು 18 ಎಂದು ಗುರುತಿಸಲಾಗಿರುತ್ತದೆ. ನಂತರ ಶವಪಂಚನಾಮೆಯ ಶವವನ್ನು ತನಿಖಾಧಿಕಾರಿಗಳಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಾನು ವೇಲು ರವರ ಮನೆಯ ಬಳಿಗೆ ಹೋದಾಗ ಸುಮಾರು 30–40 ಜನರು ಸೇರಿದ್ದರು. ಆ ಸಮಯದಲ್ಲಿ ಮೊದಲಿಗೆ ಮನೆಯ ಒಳಗೆ ಯಾರು ಹೋಗಿರುತ್ತಾರೆ ಎಂದು ನಾನು ಕೇಳಿ, ತಿಳಿದುಕೊಂಡಿರುವುದಿಲ್ಲ. ವೇಲು ಮತ್ತು ಆತನ ಕುಟುಂಬದ ಪರಿಚಯ ನನಗೆ ಇರುತ್ತದೆ. ವೇಲು ಹಾಗೂ ಸತ್ಯನಾರಾಯಣ ಮೂರ್ತಿಯ ಶವಗಳನ್ನು ಮೊದಲು ನೋಡಿದ ಬಗ್ಗೆ ನಮ್ಮ ಸಿಬ್ಬಂದಿ ಮತ್ತು ಊರಿನ ಜನರು ಹೇಳಿರುತ್ತಾರೆ. ಮೊದಲು ಯಾರು ನೋಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಶವ ಬಿದ್ದ ಸ್ಥಳವನ್ನು ನಿರ್ಭಂದಿಸುವ ಬಗ್ಗೆ ನಾನು ಸುತ್ತಲೂ ಟೇಪ್ ಹಚ್ಚಿದ್ದು, ಆದರೆ ಅದರ ಅಳತೆ ಹೇಳಲು ಬರುವುದಿಲ್ಲ. ಸ್ಥಳ ನಿರ್ಭಂದಿಸಿ ಟೇಪ್ ಹಚ್ಚಿದ ಬಗ್ಗೆ ನಾನು ಪಂಚನಾಮೆ ಮಾಡಿಲ್ಲ ಹಾಗೂ ಈ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಸ್ಥಳಕ್ಕೆ ಭೇಟಿ ನೀಡಿ, ಶವ ಬಿದ್ದ ಸ್ಥಳವನ್ನು ನಿರ್ಭಂಧಿಸಿದ ಬಗ್ಗೆ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿದ ಬಗ್ಗೆ ಫೋನು ಮೂಲಕ ಮೇಲಾಧಿಕಾರಿಗಳಿಗೆ ತಿಳಿಸಿರುತ್ತೇನೆ. ಆದರೆ ಲಿಖಿತವಾಗಿ ಯಾವುದೇ ದಾಖಲೆ ಇರುವುದಿಲ್ಲ. ಈ ಪ್ರಕರಣದ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಸುಳ್ಳಾಗಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ತಲುಪಿಸಲು ವಿಳಂಬವಾಗಿದೆ ಎಂದರೆ ಸರಿಯಲ್ಲ.

5. ನಾನು ನಿಪಿ–17 ರಂತೆ ಶವಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ, ಸದರಿ ಪಂಚನಾಮೆಯನ್ನು ನಾನು ಠಾಣೆಯಲ್ಲಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–17 ಮತ್ತು 18 ಫೋಟೋಗಳನ್ನೂ ಸಹ ಠಾಣೆಯಲ್ಲಿ ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*ಸಹಿ ಇದೆ.*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.